# ವಿಶ್ವನಂದಿನಿ ಲೇಖನಮಾಲೆ — 231

## ಉತ್ತರಾದಿಮಠದ ಸ್ಪಷ್ಟೀಕರಣಕ್ಕೆ ಉತ್ತರ

ಶ್ರೀಸತ್ಯಾತ್ಮತೀರ್ಥರ ಶಿಷ್ಯ ಹಾಗೂ ಭಕ್ತವೃಂದ ಎಂಬ ಹೆಸರಿನಲ್ಲಿ ಒಂದು ಪ್ರತಿಕ್ರಿಯೆ ಬಂದಿದೆ.

ನರಹರಿಸುಮಧ್ವ ಅವರು ಇದು ಉತ್ತರಾದಿಮಠದ ಸ್ಪಷ್ಟೀಕರಣ ಎಂದು ಪ್ರಕಟಿಸಿದ್ದಾರೆ.

ಅದರಲ್ಲಿ ಸತ್ಯಾತ್ಮರೊಬ್ಬರೇ ಈ ಕಥೆಯನ್ನು ಹೇಳಿಲ್ಲ, ಹಿಂದಿನವರೂ ಹೇಳಿದ್ದಾರೆ ಎನ್ನುವದನ್ನು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. ಸತ್ಯಾತ್ಮರು ಪ್ರವಚನ ಮಾಡುವಾಗ ಆದರ ಕಾಲನಿರ್ಣಯ ಮಾಡಿಕೊಳ್ಳುವ ಆವಶ್ಯಕತೆಯಿರಲಿಲ್ಲ ಎಂದು ಹೇಳಿದ್ದಾರೆ.

ಆ ಭಾಗವನ್ನೊಮ್ಮೆ ಓದಿ —

ಇದೇ ಹಿನ್ನೆಲೆಯಲ್ಲಿ ಶ್ರೀಸತ್ಯಾತ್ಮರೂ ಕೂಡ ಈ ಕಥೆಯನ್ನು ಹೇಳಿದ್ದು. ವ್ಯಾಪಕವಾಗಿ ಪ್ರಚಾರದಲ್ಲಿದ್ದ, ತಾವು ಹಿರಿಯರಿಂದ ಕೇಳುತ್ತ ಬಂದ ಈ ಕಥೆಯನ್ನು ಯಥಾವತ್ತಾಗಿ ನುಡಿದಿದ್ದಾರೆ. ಕಾಲದ ಬಗ್ಗೆ ಚರ್ಚೆ ಮಾಡಿ ತಿಳಿಯುವ ಅಗತ್ಯ ಖಂಡಿತ ಆಗ ಇರಲಿಲ್ಲ. ಏಕೆಂದರೆ ಅದು ಕೇವಲ ತಮ್ಮ ಶಿಷ್ಯರಿಗಾಗಿ ಕಥೆಯನ್ನು ಹೇಳುವ ಕಾರ್ಯಕ್ರಮವಾಗಿತ್ತು . ಹೊರತು

12

ಸೆಮಿನಾರ್ ಆಗಲೀ, ಪ್ರಬಂಧ ಮಂಡನೆಯಾಗಲೀ ಆಗಿರಲಿಲ್ಲ. ಅದೂ ಅಲ್ಲದೇ ಆ ಪ್ರಸಂಗದಲ್ಲಿ ಆ ತರಹದ ಕಾಲ ವಿರೋಧದ ಶಂಕೆಯೂ ಮನಸ್ಸನಲ್ಲಿ ಮೂಡಿರಲಿಲ್ಲ. ಯಾರೂ ಆಕ್ಷೇಪ ಮಾಡಿದ್ದು ಗಮನಕ್ಕೂ ಬಂದಿರಲಿಲ್ಲ. ಹಾಗೇನಾದರೂ ಆಕ್ಷೇಪ ಮಾಡಿದ್ದು ಶ್ರೀಪಾದರ ಕಣ್ಣಿಗೆ ಬಿದ್ದಿದ್ದರೆ, ಯಾರಾದರೂ ಸಂದೇಹವ್ಯಕ್ತ ಪಡಿಸಿದ್ದರೆ ನಿಶ್ಚಿತವಾಗಿಯೂ ಅದರ ವಿಮರ್ಶೆ ಪರ್ಯಾಲೋಚನೆಯನ್ನು ಮಾಡದೇ ಈ ಕಥೆಯನ್ನು ಹೇಳುತ್ತಿರಲಿಲ್ಲ. ಇದು ಕೇವಲ ಈ ಕಥೆಗೆ ಮಾತ್ರ ಸಂಬಂಧಿಸಿದ್ದಲ್ಲ. ಆ ಕಥಾಮಾಲಿಕೆಯಲ್ಲಿ ಹೇಳಿದ ಎಲ್ಲ ಕಥೆಗಳಿಗೂ ಈ ನಿಯಮ ಅನ್ವಯಿಸುತ್ತದೆ. ಕಾವ್ಯಗಳಲ್ಲಿ ಇದ್ದ, ಪ್ರಚಾರದಲ್ಲಿದ್ದ, ಹಿರಿಯರಿಂದ ಕೇಳಿ ಬಂದ ಎಲ್ಲ ತರಹದ ವಿಷಯಗಳನ್ನೂ ಅಲ್ಲಿ ಶ್ರೀಪಾದರು ಹೇಳಿದ್ದಾರೆ. ಯಾವುದನ್ನೂ ಇದು ನಾನು ಅಧ್ಯಯನ ಮಾಡಿ, ವಿಮರ್ಶೆ ಮಾಡಿ ನಿರ್ಣಯಿಸಿ ಹೇಳುತ್ತಿದ್ದೇನೆ ಎಂದು ಹೇಳಿಲ್ಲ.

ಅಂದರೆ, ಸೆಮಿನಾರುಗಳಲ್ಲಿ ಪ್ರಬಂಧಗಳನ್ನು ಮಂಡಿಸಬೇಕಾದರೆ ಮಾತ್ರ ಸಂಶೋಧನೆ ಮಾಡಿ ಹೇಳಬೇಕೆ. ಶಿಷ್ಯರಿಗೆ ಹೇಳಬೇಕಾದರೆ ನಿರ್ಣಯಿಸಿಕೊಳ್ಳುವ ಆವಶ್ಯಕತೆಯಿಲ್ಲವೇ.

ದೃಢಪಡಿಸಿಕೊಂಡು ಹೇಳಬೇಕಾದ್ದು ಕರ್ತವ್ಯವಲ್ಲವೇ ಎಂದರೆ, ಆಗ ಅದರ ಆವಶ್ಯಕತೆಯಿರಲಿಲ್ಲ ಎನ್ನುತ್ತಾರೆ ಇವರು. ಅಂದರೆ ಯಾರಾದರೂ ಆಕ್ಷೇಪ ಮಾಡಿದಾಗ ಮಾತ್ರ ಸಂಶೋಧನೆ ಮಾಡಬೇಕೆ. ತಾನು ತತ್ವವನ್ನು ತಿಳಿಯುವಾಗಲೂ, ತನ್ನ ಶಿಷ್ಯರಿಗೆ ಹೇಳುವಾಗಲೂ ದೃಢಪಡಿಸಿಕೊಂಡೇ ಹೇಳಬೇಕು ಎನ್ನುವದನ್ನು ಟೀಕಾಕೃತ್ಪಾದರು ಮೇಲಿಂದಮೇಲೆ ಪ್ರತಿಪಾದಿಸುತ್ತಾರೆ. ಅನೇಕ ಬಾರಿ ಅದ್ವೈತಿಗಳಿಗೆ ಪ್ರಶ್ನೆ ಮಾಡಿದ್ದಾರೆ. ನಮಗೆ ಉತ್ತರ ನೀಡುವದು ಬೇಡ, ನಿಮ್ಮ ಶಿಷ್ಯರಿಗೆ ತತ್ವ ಹೇಳಬೇಕಾದರೂ, ನೀವು ತತ್ವವನ್ನು ತಿಳಿಯಬೇಕಾದಾದರೂ ವಿರೋಧವನ್ನು ಪರಿಹಾರ ಮಾಡಿಕೊಳ್ಳಬೇಕಲ್ಲವೇ ಎಂದು.

ಅಂದರೆ, ಹೇಳಿದ ಕಥೆಯನ್ನು ಹೀಗೆ ಪ್ರಮಾಣೀಕರಿಸಿಕೊಳ್ಳದೇ ಶಿಷ್ಯರಿಗಾದರೂ ಹೇಳಬಹುದೇ? ಅದು ಮಾಧ್ವರ ಕ್ರಮವೇ?

ಮತ್ತು, ಸತ್ಯಾತ್ಮರು ಶ್ರೀ ವಿಜಯೀಂದ್ರರ ಗ್ರಂಥವನ್ನು ಓದಿಲ್ಲವೇ? ಓದಿದ ನಂತರವೂ “ಅದ್ವೈತಸಿದ್ಧಿಗೆ

ಖಂಡನೆ ಬರೆಯಿರಿ ಎಂದು ವ್ಯಾಸರಾಜರು ಹೇಳಿದ ಬಳಿಕವೂ ಅವರ ಶಿಷ್ಯರಿಗೆ ಏನು ಮಾಡಬೇಕೆಂದು ತೋಚಲಿಲ್ಲ” ಎಂದು ಹೇಳುವದು ಅಪಚಾರವಲ್ಲವೇ.

ಒಂದು ಕಥೆ ಕರ್ಣಾಕರ್ಣಿಯಾಗಿ ಬಂದಿದೆ ಎಂದ ಮಾತ್ರಕ್ಕೆ ಹೇಳುವದು ಸತ್ಯಾತ್ಮರಿಗೆ ಶೋಭೆ ತರುವಂತಹ ವಿಷಯವೇ. ಆ ರೀತಿಯಾಗಿ ಕರ್ಣಾಕರ್ಣಿಯಾಗಿ ಬಂದ ಎಲ್ಲ ಕಥೆಗಳನ್ನೂ ಹೇಳಿದ್ದಾರೆಯೇ?

ಸಂಶೋಧನೆ ಮಾಡಿ ನಿರ್ಣಯಿಸಿ ಹೇಳಬೇಕಾದ ಸ್ಥಾನದಲ್ಲಿರುವವರೇ ಸಂಶೋಧನೆ ಮಾಡುವ ಸಂದರ್ಭವಿರಲಿಲ್ಲ ಎಂದು ತಪ್ಪಿಸಿಕೊಳ್ಳಬಹುದೇ?

ಸರಿ, ಆಗ ಸಂಶೋಧನೆ ಮಾಡಿರಲಿಲ್ಲ ಎನ್ನುವದು ನಿಮ್ಮ ಮಾತಿನಿಂದಲೇ ಸ್ಪಷ್ಟ. ಆಕ್ಷೇಪ ಮಾಡಿದ್ದರೆ, ಪ್ರಶ್ನೆ ಮಾಡಿದ್ದರೆ ಸಂಶೋಧನೆ ಮಾಡುತ್ತಿದ್ದರು ಎಂಬ ಮಾತನ್ನೂ ಹೇಳಿದ್ದೀರಿ.  ಮತ್ತು ಸುಮಾರು ಎಂಟ್ಟತ್ತು ವರ್ಷಗಳ ಹಿಂದೆಯೇ ಇದರ ಕುರಿತು

ಯಾರೋ ಅಕ್ಷೇಪ ಮಾಡಿದರು ಎಂದೂ ತಿಳಿಸಿದ್ದೀರಿ. ಅಂದರೆ ಆಕ್ಷೇಪ ಮಾಡಿ ನಿಮ್ಮ ಪ್ರಕಾರವೇ ಹತ್ತುವರ್ಷಗಳಾದರೂ ಯಾಕಿನ್ನು ನಿರ್ಣಯ ಮಾಡಿ ಹೇಳಿಲ್ಲ. ಶ್ರೀ ವ್ಯಾಸರಾಜರ ಕಾಲಮಾನದಲ್ಲಿ, ಶ್ರೀ ರಘೂತ್ತಮರ ಕಾಲಮಾನದಲ್ಲಿ ಅಷ್ಟು ಗೊಂದಲವಿದೆಯೇ? ಗೊಂದಲವಿಲ್ಲ ಅಲ್ಲವೇ. ಉತ್ತರಾದಿಮಠದವರು

ಈ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ಪ್ರಸ್ತುತ ಶ್ರೀಸತ್ಯಾತ್ಮರು ಹೇಳಿದ ಕಥೆಯ ಬಗ್ಗೆ ಕಾಲಮಾನದ ಸಮಸ್ಯೆಯನ್ನು ಎತ್ತಲಾಗಿದೆ. ಕಾಲಮಾನ ಹಾಗೂ ಕಥೆ ಇವುಗಳ ಮಧ್ಯದ ಗೊಂದಲವನ್ನು ಪರಿಹರಿಸಲೇಬೇಕು. ಅದಕ್ಕಾಗಿ ಅಧ್ಯಯನ ವಿಮರ್ಶೆಯನ್ನು ಮಾಡಲೇ ಬೇಕು. ಈ ಲೇಖನದ ಪ್ರಾರಂಭದಲ್ಲಿಯೇ ಹೇಳಿದಂತೆ ಈ ಕಾಲಮಾನದ ಗೊಂದಲವನ್ನು ಸುಮಾರು

14

ಎಂಟು-ಹತ್ತು ವರ್ಷಗಳ ಹಿಂದೆಯೇ ಒಬ್ಬರು ಎತ್ತಿ ತೋರಿಸಿದ್ದಾರೆ. ಅದರ ಕುರಿತಾಗಿ ಅಧ್ಯಯನ ನಡೆಯುತ್ತಿದೆ. ಇದು ಕಾಲಮಾನದ ದೃಷ್ಟಿಯಿಂದ ಸರ್ವಥಾ ಹೊಂದುವುದೇ ಇಲ್ಲ ಎಂದು ನಿರವಕಾಶವಾಗಿ ನಿರ್ಣಯವಾದಲ್ಲಿ ಈ ಕಥೆಯನ್ನು ಒಪ್ಪಲೇ ಬೇಕು, ಹೇಳಲೇ ಬೇಕು ಎಂಬ ಆಗ್ರಹ ನಮಗೆ ಸರ್ವಥಾ ಇಲ್ಲ. ಇದನ್ನು ಶ್ರೀಪಾದರೂ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಏನೋ ಒಂದು ಆಕ್ಷೇಪ ಬಂದಿದೆ ಎಂದ ಮಾತ್ರಕ್ಕೆ ನಾವು ಹೇಳಿದ್ದು ಸುಳ್ಳಾಗಬೇಕಿಲ್ಲ. ಆದರೂ ಶ್ರೀಪಾದರು ಇದು ವಿಮರ್ಶೆ ಮಾಡಿ ನಿರ್ಧರಿಸಬೇಕಾದ ವಿಷಯ ಎಂಬುದಾಗಿ ತೀರ್ಮಾನಿಸಿ ಈ ಕಥೆಯನ್ನು ಮತ್ತೆ ಎಲ್ಲಿಯೂ ಹೇಳಿಲ್ಲ. ಹೇಳಿದ್ದರೂ ಹೀಗೂ ಕಥೆಯುಂಟು ಎಂಬ ಅಭಿಪ್ರಾಯದಲ್ಲಿಯೇ ಹೇಳಿರುತ್ತಾರೆ. ಹೊರತು ಇದೇ ನಿರ್ಣಯ ಎಂಬುದಾಗಿ ಅಲ್ಲ. ಆಶ್ಚರ್ಯವೆಂದರೆ 15 ವರ್ಷದ ಹಿಂದೆ ಹೇಳಿದ್ದನ್ನು, ಇದು ಚರ್ಚಾಸ್ಪದ, ವಿಚಾರಾಧೀನ ಎಂದು ಶ್ರೀಪಾದರೇ ಪಕ್ಕಕ್ಕೆ ಎತ್ತಿಟ್ಟ ವಿಷಯವನ್ನು ಮತ್ತೆ ಮತ್ತೆ ಪ್ರಚಾರ ಮಾಡಿ, ಮತ್ತೆ ಮತ್ತೆ ಶ್ರೀಪಾದರನ್ನು ನಿಂದಿಸಿ ದೊಡ್ಡ ವಿಮರ್ಶೆಯನ್ನು ಮಾಡುತ್ತಿದ್ದೇವೆ, ಸತ್ಯವನ್ನು ಜಗತ್ತಿಗೆ ಸಾರುತ್ತಿದ್ದೇವೆ ಎಂದು ಕೊಚ್ಚಿಕೊಳ್ಳುವವರ ಪ್ರವೃತ್ತಿಗೆ ಏನನ್ನಬೇಕು ಗೊತ್ತಿಲ್ಲ.

ಪರಮಪ್ರಮಾಣ ಎಂದು ಒಪ್ಪಿರುವ ಗ್ರಂಥಗಳಿಂದಲೇ ಶ್ರೀ ರಘೂತ್ತಮರ ಜನನ 1547ರಲ್ಲಿ ಎಂದು ಸಿದ್ಧವಾಗುತ್ತಿರುವಾಗ, ಶ್ರೀ ಚಂದ್ರಿಕಾಚಾರ್ಯರ ನಿರ್ಯಾಣ 1539 ರಲ್ಲಿ ಎಂದು ನಿಸ್ಸಂದಿಗ್ಧವಾಗಿ ನಿರ್ಣಯವಾಗಿರುವಾಗ, ಈ ಕಥೆ ಸುಳ್ಳು ಎಂದು ನಿರ್ಣಯವಾಗುವದಿಲ್ಲವೇ.

ಇಷ್ಟು ಸುಲಭವಾಗಿ ನಿರ್ಣಯವಾಗುವ ವಿಷಯವನ್ನು, ನೀವೇ ಹೇಳಿದಂತೆ ಹತ್ತು ವರ್ಷಗಳ ಹಿಂದೆಯೇ ಆಕ್ಷೇಪ ಬಂದರೂ ಯಾಕೆ ನಿರ್ಣಯ ಮಾಡಿ ಹೇಳಿಲ್ಲ?

ಇದು ಕೇವಲ ಸಮಾಜದಲ್ಲಿ, ಮಠ-ಮಠಗಳಲ್ಲಿ, ಮಠದ ಪಂಡಿತರುಗಳಲ್ಲಿ, ಮಠದ ಅನುಯಾಯಿಗಳಲ್ಲಿ ಹುಳಿಹಿಂಡಿ ಒಡಕನ್ನು ಮೂಡಿಸುತ್ತಿರುವ ನಿಂದನೀಯ ಪ್ರವೃತ್ತಿ ಮಾತ್ರವಲ್ಲದೇ ಇನ್ನೇನೂ ಅಲ್ಲ.

ಅಖಂಡವೇದಮಾರ್ಗಪ್ರವರ್ತಕರು ಎಂದು ಶ್ರೀ ವಿಷ್ಣುದಾಸಾಚಾರ್ಯರಿಂದ ಸ್ತುತರಾದ ಶ್ರೀ ರಾಜೇಂದ್ರತೀರ್ಥರಿಗೆ ಅಭಿಷೇಕದ ವಿಧಿಯೂ ಗೊತ್ತಿರಲಿಲ್ಲ, ಪಂಡಿತರಿಗೆ ತೀರ್ಥ ಕೊಡುವ ರೀತಿಯೂ ಗೊತ್ತಿರಲಿಲ್ಲ ಎಂದು ನಿಮ್ಮ ಮಠದ ಸಂಪ್ರದಾಯ ಪದ್ಧತಿ ಎಂಬ ಪುಸ್ತಕ ಬರೆದರು ಅದು ಮಹಾನುಭಾವರ ನಿಂದೆಯಲ್ಲ.  ಆ ಮಠಗಳ ಅನುಯಾಯಿಗಳಲ್ಲಿ ಹುಳಿ ಹಿಂಡುವ ಕಾರ್ಯವಲ್ಲ.

ಶ್ರೀ ವ್ಯಾಸರಾಜರ ಕುರಿತು ಅನೇಕ ಸುಳ್ಳು ಕಥೆಗಳನ್ನು ಹೇಳಿದಾಗಲೂ ಅದು ಅದು ಮಹಾನುಭಾವರ ನಿಂದೆಯಲ್ಲ. ಆ ಮಠಗಳ ಅನುಯಾಯಿಗಳಲ್ಲಿ ಹುಳಿ ಹಿಂಡುವ ಕಾರ್ಯವಲ್ಲವೇ.

ಕಲ್ಪತರುವಿನಲ್ಲಿರುವದು ವಿಬುಧೇಂದ್ರರ ಪಾಠದ ಕ್ರಮವನ್ನು ರಘುನಾಥರು ಅರಿಯಲಿಚ್ಛಿಸಿದರು

ಎಂದು, ಅದನ್ನು ಬದಲಿಸಿ ಶ್ರೀಪಾದರಾಜರ ಪರೀಕ್ಷೆಯನ್ನು ರಘುನಾಥರು ತೆಗೆದುಕೊಂಡರು ಎಂದರೂ ಮಹಾನುಭಾವರ ನಿಂದೆಯಲ್ಲ. ಆ ಮಠಗಳ ಅನುಯಾಯಿಗಳಲ್ಲಿ ಹುಳಿ ಹಿಂಡುವ ಕಾರ್ಯವಲ್ಲ.

ಒಂದೇ ಎರಡೇ, ವಿಜಯಧ್ವಜರು, ರಾಜೇಂದ್ರರು ವಿಬುಧೇಂದ್ರರು, ಶ್ರೀಪಾದರಾಜರು, ವ್ಯಾಸರಾಜರು, ರಾಮಚಂದ್ರತೀರ್ಥರು, ರಾಘವೇಂದ್ರಸ್ವಾಮಿಗಳು, ಸುಮತೀಂದ್ರರು ವರದೇಂದ್ರರು, ಮುಂತಾದ ಮಹಾನುಭಾವರ ಕುರಿತು ಅಸಹ್ಯವಾದ ಕಥೆಗಳನ್ನು ಹೇಳಿದಾಗ ಅದು ಮಹಾನುಭಾವರ ನಿಂದೆಯಲ್ಲ. ಆ ಮಠಗಳ ಅನುಯಾಯಿಗಳಲ್ಲಿ ಹುಳಿ ಹಿಂಡುವ ಕಾರ್ಯವಲ್ಲ.

ಆದರೆ ಸತ್ಯಾತ್ಮರು ಸುಳ್ಳು ಕಥೆ ಹೇಳಿದ್ದಾರೆ ಎಂದು ಪ್ರಮಾಣಪುರಸ್ಸರವಾಗಿ ಪ್ರತಿಪಾದಿಸಿದರೆ ಹುಳಿ ಹಿಂಡುವ ಕಾರ್ಯವಾ?

ಉತ್ತರಾದಿಮಠದವರು ಶತಶತಮಾನಗಳಿಂದ ಮಾಡಿಕೊಂಡು ಬಂದರೆ ತಪ್ಪಲ್ಲ. ಆದರೆ,

ಮತ್ತೊಬ್ಬರು ಮಾಡಿದರೆ ಅದು ಸಮಾಜವನ್ನು ಒಡೆಯುವ ಕೆಲಸ. ವಾಶಂತೋ ದೇಶನಾಶಸ್ತ್ರಿತ್ವ ಎನ್ನುವ ಗುಣವನ್ನು ರೂಢಿಸಿಕೊಳ್ಳುವದು ನಿಮಗೆ ಶೋಭೆಯೇ. ಸಾವಧಾನವಾಗಿ ಯೋಚಿಸಿ.

ಒಬ್ಬ ಉದಾಸೀನವ್ಯಕ್ತಿಯ ಮುಂದೆ 'ರಾಮಾಯಣದಲ್ಲಿಯೋ, ಮಹಾಭಾರತದಲ್ಲಿಯೋ ತಪ್ಪಿದೆ' ಎಂದು ಹೇಳಿದರೆ ಅದನ್ನು ಅವನು ಒಪ್ಪುತ್ತಾನೆ. ಆದರೆ ಒಬ್ಬ ಭಾರತೀಯ ಸಾಂಪ್ರದಾಯಿಕ ವಿದ್ವಾಂಸನ ಮುಂದೆ ಈ ಮಾತನ್ನು ಹೇಳಿದರೆ ಅವನು ಖಂಡಿತ ಒಪ್ಪುವುದಿಲ್ಲ. ಹೀಗೆ ಎಲ್ಲ ಮತ, ಮಠ, ಸಂಪ್ರದಾಯ, ಪರಂಪರೆಯವರೂ ಅಷ್ಟೇ. ಅವರ ಗ್ರಂಥಗಳಲ್ಲಿ ತಪ್ಪಿದೆ, ನಿಮ್ಮ ಸಂಪ್ರದಾಯ ತಪ್ಪು ಎಂದು ಯಾರೋ ಹೇಳಿದ ಮಾತ್ರಕ್ಕೆ ಅವರು ಅದನ್ನು ಒಪ್ಪುವುದಿಲ್ಲ. ಒಪ್ಪಲೂ ಬಾರದು. ಅವರು ಅದನ್ನು ವಿಮರ್ಶಿಸುತ್ತಾರೆ. ಆಲೋಚಿಸುತ್ತಾರೆ. ಸಮರ್ಥಿಸುವ ಪ್ರಯತ್ನಮಾಡುತ್ತಾರೆ. ಸಮರ್ಥಿಸುತ್ತಾರೆ. ಹೀಗೇ ಮಾಡಬೇಕು. ಇದೇ ಸರಿಯಾದದ್ದು.

ಯಾವ ಗ್ರಂಥಗಳ ಪ್ರಾಮಾಣ್ಯ ನಿಶ್ಚಿತವಾಗಿದೆ, ಅಂತಹ ಗ್ರಂಥಗಳ ಮೇಲೆ ಬಂದ ಆಕ್ಷೇಪವನ್ನು ಪರಿಹರಿಸಲೇಬೇಕು.

ಉತ್ತರಾದಿಮಠದಲ್ಲಿ ಅನೇಕ ವಿಜಯಕಾವ್ಯಗಳು ಬಂದಿವೆ. ಅವುಗಳ ಕುರಿತು ನಾನು ಅಕ್ಷೇಪ ಮಾಡುತ್ತಿದ್ದೇನಾ? ಅದರಲ್ಲಿ ಗುರುಗಳ ವರ್ಣನೆಯಿದೆ. ನೀವು ಹೇಳುವ ಕಾವ್ಯಧರ್ಮಗಳು ಅಲ್ಲಿ ಕೂಡುತ್ತವೆ.

ಆದರೆ ಪೂರ್ಣಬೋಧಗುರುವಂಶಕಥಾಕಲ್ಪತರು, ಸತ್ಕಥಾ, ಉತ್ತರಾದಿಮಠದ ಸಂಪ್ರದಾಯಪದ್ಧತಿ ಮುಂತಾದವರು ಮಹಾನುಭಾವರ ಅವಹೇಳನದಿಂದ ಕೂಡಿದ ಗ್ರಂಥಗಳು. ಅವನ್ನು

ಬಹಿಷ್ಕರಿಸಿ ಎಂದು ಹೇಳುತ್ತಿರುವದು. ಇಷ್ಟಾದರೂ ಪ್ರಾಂಜಲ ಮನಸ್ಸು ಆವಶ್ಯಕವಲ್ಲವೇ?

“ಸಮರ್ಥಿಸಲೇಬೇಕು, ಸಮರ್ಥಿಸುತ್ತಾರೆ, ಹೀಗೇ ಮಾಡಬೇಕಾದ್ದು, ಇದೇ ಸರಿಯಾದದ್ದು” ಎಂದು ಖಚಿತವಾದ ಧ್ವನಿಯಲ್ಲಿ ಹೇಳುತ್ತೀರಲ್ಲ, ಇದರಲ್ಲಿಯೇ ತಿಳಿಯುತ್ತದೆ, ನೀವು ನೀವು ಈ ಪುಳ್ಳುಕಥೆಗಳನ್ನು ಈಗಲೂ ಕೈಬಿಡಲು ಸಿದ್ಧರಿಲ್ಲ ಎನ್ನುವದು.

ಇದೇ ಪ್ರವೃತ್ತಿ ಉಳಿದ ಜನರಿಗೆ ಹಿಂಸೆ ಮಾಡುತ್ತಿರುವದು.

ನರಹರಿ ಸುಮಧ್ವ ಅವರೇ, ನೋಡಿ. ನೀವೇನೋ ಕಾಲಮಾನ ಹೊಂದುವದಿಲ್ಲ ಎನ್ನುವದನ್ನು ಒಪ್ಪಿದಿರಿ. ಆ ಗ್ರಂಥಗಳಲ್ಲಿ ತಪ್ಪಿವೆ ಎನ್ನುವದನ್ನೂ ಒಪ್ಪಿದಿರೆ. ಆದರೆ ಇವರು ಸಮರ್ಥಿಸಿಯೇ ಸಮರ್ಥಿಸುತ್ತೇವೆ ಎನ್ನುತ್ತಾರೆ. ಈಗಲಾದರೂ ಅರ್ಥವಾಯಿತೇ. ಯಾಕಾಗಿ ಉತ್ತರ ನೀಡುವ ಪ್ರಸಕ್ತಿ ಇದೆ ಎನ್ನುವದು.

ಇದು ಬಿಡಿ, ತಾವು ಪಾಠ ಹೇಳುವ ವಿದ್ಯಾರ್ಥಿಗಳಿರಬಹುದು, ತಮ್ಮ ಕಾರಿನ

28

ಚಾಲಕ ಇರಬಹುದು, ಮಠದ ಅಡಿಗೆಯವರಿರಬಹುದು ಅವರಿಗೂ ಅಗೌರವವಾಗಬಾರದು. ಅವರ ಮನಸ್ಸಿಗೂ ನೋವಾಗುವಂತೆ ಮಾತಾಡಬಾರದು ಎಂಬ ವಾಙ್ಮಯ ವ್ರತವನ್ನು ಪಾಲಿಸುತ್ತಿರುವವರು ಶ್ರೀಪಾದರು. ಕೃಷ್ಣ ಎಂಬ ಹೆಸರಿನವನನ್ನು ಎಂದಿಗೂ ಚೇಷ್ಟೆಗೂ ಕಿಟ್ಟ್ಯಾ ಎಂದು ತಮ್ಮ ಜೀವನದಲ್ಲಿಯೇ ಅಪ್ಪಿತಪ್ಪಿಯೂ ಕರೆಯದ ಸಜ್ಜನರು ಶ್ರೀಪಾದರು. ತಮ್ಮನ್ನು ಸದಾ ದ್ವೇಷಿಸುವ ಜನರನ್ನೂ ಪ್ರೀತಿಯಿಂದಲೇ, ನಗುತ್ತಲೇ ಮಾತಾನಾಡಿಸುವ, ಮನಸಿನಲ್ಲಿಯೂ ಅವರಿಗೆ ಕೇಡನ್ನು ಬಯಸದ ಸಜ್ಜನಿಕೆಯ ಸಾಕಾರಮೂರ್ತಿ ಶ್ರೀಪಾದರು. ಅಂಥ ಚೇತನರು ಮಹಾಜ್ಞಾನಿಗಳಾದ ಶ್ರೀವ್ಯಾಸರಾಜರಂತಹ ಮಹಾನುಭಾವರಿಗೆ ಅವಮಾನ ಮಾಡಿದ್ದಾರೆ. ಅಗೌರವ ತೋರಿದ್ದಾರೆ ಎನ್ನುವುದು ಮೊಲದ ಕೋಡಿನಷ್ಟೇ ಅತ್ಯಂತ ಅಸತ್ಯವಾದದ್ದು. ಮೊಲದ ಕೋಡು ಸತ್ಯವಾದರೂ ಆದೀತು ಆದರೆ ಶ್ರೀಪಾದರು ಶ್ರೀವ್ಯಾಸರಾಜರಿಗೆ ಅವಮಾನಿಸಿದ್ದಾರೆ. ಶ್ರೀವ್ಯಾಸರಾಜರ ಬಗ್ಗೆ ಅವರಿಗೆ ಅಗೌರವ ಇದೆ ಎನ್ನುವ ಮಾತು ಮಾತ್ರ ಸರ್ವಥಾ ಸತ್ಯವಾಗಲು

ಸತ್ಯಾತ್ಮರಲ್ಲಿರುವ ಇಷ್ಟೆಲ್ಲ ಗುಣಗಳಿದೆ ಎಂದು ಹೇಳುತ್ತಿದ್ದೀರಿ, ಸಂತೋಷ.

ಆದರೆ ತಮ್ಮ ಕಾರಿನ ಡ್ರೈವರಿನ ಮನಸ್ಸಿಗೂ ಅಸಮಾಧಾನವಾಗಬಾರದು ಎಂಬ ವ್ರತ ಪಾಲಿಸುತ್ತಿರುವ ಸತ್ಯಾತ್ಮರು ಪರಮನೀಚಪುಸ್ತಕವಾದ ಪೂರ್ಣಬೋಧಕಥಾ-

ವಂಶಕಲ್ಪತರುವಿನಲ್ಲಿರುವ ವೇದನಿಧಿಗಳು ಅಕ್ಷೋಭ್ಯವೈಷ್ಣವರಾದ ಶ್ರೀ ರಾಮಚಂದ್ರತೀರ್ಥ-ಶ್ರೀಪಾದಂಗಳವನ್ನು ವಾದಕ್ಕಾಗಿ ಬೆನ್ಹತ್ತಿ ಹೋದರು, ರಾಮಚಂದ್ರತೀರ್ಥಗುರುಸಾರ್ವಭೌಮರು ಉತ್ತರ ನೀಡಲಿಕ್ಕಾಗದೆ ಓಡಿ ಓಡಿ ಹೋಗುತ್ತಿದ್ದರು, ರಾಜನಿಗೆ ಜಯಪತ್ರ ನೀಡಿ ಹೋಗಲು ಎಂಬ ಕಥೆಯನ್ನು ಹೇಳಿದ್ದಾರಲ್ಲಾ, ಆಗ ಆ ಕಥೆಯಿಂದ ಶ್ರೀ ರಾಮಚಂದ್ರತೀರ್ಥಗುರುಸಾರ್ವಭೌಮರ ಭಕ್ತರ ಮನಸ್ಸಿಗೆ ನೋವಾಗುತ್ತದೆ ಎಂದು ತಿಳಿದಿರಲಿಲ್ಲವೇ.

ಅದಕ್ಕಾಗಿಯೇ ಅಲ್ಲವೇ ಈ ಹೋರಾಟ.

ಆ ಕಥೆಯನ್ನು ಹೇಳಬೇಕಾದರೆ ಶ್ರೀ ರಾಮಚಂದ್ರತೀರ್ಥಗುರುಸಾರ್ವಭೌಮರ ಹೆಸರನ್ನು ಮಾತ್ರ ಬಿಟ್ಟಿದ್ದಾರೆ ಸತ್ಯಾತ್ಮರು. “ವಿದ್ಯಾಧೀಶರು ಯಾರನ್ನು ನಿಗ್ರಹ ಮಾಡಬೇಕು ಎಂದು ಹೇಳಿದ್ದಾರೋ ಅವರನ್ನು ನಿಗ್ರಹ ಮಾಡಲು” ಎಂದು ಹೇಳುತ್ತಾರೆ. ಕಲ್ಪತರುವಿನಲ್ಲಿ, ಗುರುಚರ್ಯೆಯಲ್ಲಿ ಇರುವ ಮಾತು ತಾನೇ ಅದು?

ಮತ್ತೊಬ್ಬರ ಮನಸ್ಸು ನೋವಾಗಬಾರದು ಎಂಬ ವ್ರತ ಸತ್ಯಾತ್ಮರಿಗಿದ್ದಿದ್ದರೆ ಆ ಕಥೆಯನ್ನೇ ಅವರು ಹೇಳಬಾರದಿತ್ತು ತಾನೆ. ಹೆಸರನ್ನು ಮಾತ್ರ ಹೇಳದೇ ಕಥೆಯನ್ನು ಹೇಳುವ ಹುನ್ನಾರ ಏನು.

ಇನ್ನು ಎಲ್ಲ ಕಥೆಗಳನ್ನೂ ಹೇಳುವದಾಗಿದ್ದರೆ ಉತ್ತರಾದಿ ಮಠದ ಯತಿಗಳೊಬ್ಬರಿಗೆ[1] ಮತ್ತೊಬ್ಬ ಯತಿಗಳು ಶಾಪ ನೀಡಿದರೆಂದೂ, ಅವರ ಊರಿನ ನದಿ ದಾಟುವದರಲ್ಲಿ ಪ್ರಾಣ ಹೋಗುವಂತೆ ಶಾಪ ನೀಡಿದರೆಂದೂ ಆ ಶಾಪ ನಡೆಯಿತೆಂದೂ ಕಥೆ ಹೇಳುತ್ತಾರೆ. ಅದರ ಕುರಿತ ಶ್ಲೋಕವನ್ನೂ ಹೇಳುತ್ತಾರೆ. ಕೇಳಿದ ಎಲ್ಲ ಕಥೆಗಳನ್ನೂ ಹೇಳುವದಾದರೆ ಅದನ್ನೂ ಹೇಳಬೇಕಿತ್ತಲ್ಲವೇ. ಅಥವಾ ಉತ್ತರಿಸಲಾದರೂ ಹೇಳಬೇಕಿತ್ತಲ್ಲವೇ.

ಅದನ್ನು ಹೇಳದೇ, ಈ ಕಥೆಗಳನ್ನು ಮಾತ್ರ ಹೇಳುತ್ತಾರೆ, ಯಾಕೆ?

---

[1] ನಾನು ಆ ಮಹಾನುಭಾವರಲ್ಲಿ ವಿಶ್ವಾಸವಿಟ್ಟವನು, ಹೀಗಾಗಿ ಹೆಸರು ತೆಗೆದುಕೊಳ್ಳುತ್ತಿಲ್ಲ. ನನಗೆ ಅದರ ಕುರಿತು ಮಾತನಾಡುವ ಆವಶ್ಯಕತೆಯೂ ಇಲ್ಲ. ಕೇವಲ ಪ್ರತಿಪ್ರಶ್ನೆಯಾಗಿ ಕೇಳುತ್ತಿದ್ದೇನೆ.

ಯಾವ ಶ್ರೀ ರಾಮಚಂದ್ರತೀರ್ಥಶ್ರೀಪಾದಂಗಳವರು ಅಕ್ಷೋಭ್ಯವೈಷ್ಣವರು ಎಂದು ಪ್ರಸಿದ್ಧರೋ, ಯಾವ ಮಾಧ್ವನಿಗೂ ಒಂದು ರಾತ್ರಿಯೂ ನಮ್ಮ ಊರಿನಲ್ಲಿ ವಾಸಿಸುವ ಸಾಮರ್ಥ್ಯವಿಲ್ಲ ಎಂದು ಧ್ವಜವನ್ನು ಹಾಕಿ ಕುಳಿತಿದ್ದ ಸಾವಿರಾರು ಅದ್ವೈತಿ ವಿದ್ವಾಂಸರ ಊರಿನಲ್ಲಿ ಒಂದು ರಾತ್ರಿಯಲ್ಲ, ಹೋಗಿ ಚಾತುರ್ಮಾಸ್ಯಕ್ಕೇ ಕುಳಿತು ನಾಲ್ಕು ತಿಂಗಳಲ್ಲಿ ಸಂಕ್ಷಿಪ್ತ ಪೂಜೆಯನ್ನು ಮಾಡುತ್ತ, ವಾಗ್ಬೊಮ್ಮಲೇ ಬೋಮ್ಮಲು, ಪೋರ, ಎಂದು ಸಾವಿರಾರು ವಾದಿಗಳನ್ನು ನಿಗ್ರಹಿಸುತ್ತ ಶಬ್ದಬ್ರಹ್ಮನ ಆರಾಧನೆ ಮಾಡಿ, ಚಾತುರ್ಮಾಸ್ಯ ಮುಗಿಯುವದರ ವೇಳೆಗೆ ಅವರೆಲ್ಲರನ್ನೂ ಮಹಾವೈಷ್ಣವರನ್ನಾಗಿ ಪರಿವರ್ತಿಸಿದ, ನಮಗೆ ಬೇರೆಲ್ಲೆಡೆಯೂ ಸಿಗದ ಅದ್ಭುತ ವಿಷಯಗಳ ಖನಿಯಾದ  ಪರಮಾದ್ಭುತ ವ್ಯಾಖ್ಯಾನವನ್ನು ನ್ಯಾಯಸುಧಾಗ್ರಂಥಕ್ಕೆ ರಚಿಸಿದ ಅಕ್ಷೋಭ್ಯವೈಷ್ಣವರಾದ ಶ್ರೀರಾಮಚಂದ್ರತೀರ್ಥಶ್ರೀಪಾದಂಗಳವರು ವಾದಕ್ಕೆ ಹೆದರಿಹೆದರಿ ಓಡಿ ಹೋಗುತ್ತಿದ್ದರು ಎಂಬ ಮಾತನ್ನು ಹೇಳುವಾಗ ಆ ರಾಮಚಂದ್ರತೀರ್ಥಶ್ರೀಪಾದಂಗಳವರ ಶಿಷ್ಯರ

ಮನಸ್ಸಿಗೆ ನೋವಾಗುತ್ತದೆ ಎನ್ನುವದು ಸತ್ಯಾತ್ಮರಿಗೆ ಗೊತ್ತಿರಲಿಲ್ಲವೇ.

ಆಗ ಮತ್ತೊಬ್ಬರ ಮನಸ್ಸನ್ನು ನೋಯಿಸಬಾರದು ಎಂಬ ವ್ರತವನ್ನು ಸತ್ಯಾತ್ಮರು ಪಾಲಿಸುತ್ತಿರಲಿಲ್ಲವೇ.

ಮನಸ್ಸು ನೋಯಿಸಬಾರದು ಎಂಬ ಉದ್ದೇಶವಿದ್ದವರು ಆ ಕಥೆಗಳನ್ನೇ ಕೈ ಬಿಡಬೇಕಿತ್ತು. ಯತಿಗಳೊಬ್ಬರು ಶಾಪದಿಂದ ಮೃತರಾದರು ಎಂಬ ಕಥೆಯನ್ನು ಕೈಬಿಟ್ಟಂತೆ. ಬೇರೆಯವರ ಮಠದ ಶಿಷ್ಯರ ಮನಸ್ಸಿಗೆ ನೋವಾಗುವಂತೆ ಮಾತನಾಡಬಹುದೇ, ನೀವೇ ಹೇಳಿ.

ಶ್ರೀ ರಾಮಚಂದ್ರತೀರ್ಥಗುರುಸಾರ್ವಭೌಮರು ಮುಂತಾದವರ ಅವಹೇಳನವನ್ನು ಕೇಳಿ ಅವರ ಮುಂದೆ ಕುಳಿತ ನಿಮ್ಮ ಮನಸ್ಸಿಗೆ ನೋವಾಗದಿರಬಹುದು, ಅದರ ಅವರ ಪಾದಗಳನ್ನೇ ನಂಬಿ ಬದುಕುತ್ತಿರುವ ನಮ್ಮ ಮನಸ್ಸಿಗೆ ಅಪಾರ ದುಃಖವಾಗಿದೆ. ನೋವಾಗಿದೆ. ಅದಕ್ಕಾಗಿಯೇ ಈ ಹೋರಾಟ.

ಆ ಪರಮನೀಚಕೃತಿಗಳನ್ನು ಅಪ್ರಾಮಾಣಿಕ ಎಂದು ಸಮಾಜದ ಮಧ್ಯದಲ್ಲಿ ಸ್ಥಾಪಿಸುವವರೆಗೆ ಅವಶ್ಯವಾಗಿ ಈ ಹೋರಾಟ ಅವಶ್ಯವಾಗಿ ಮುಂದುವರೆಯುತ್ತದೆ.

ಶ್ರೀ ಸತ್ಯಾತ್ಮತೀರ್ಥರ ಸಂನ್ಯಾಸಧರ್ಮನಿಷ್ಠೆ, ವ್ಯಾಸತ್ರಯದ ಅಧ್ಯಯನ ಅಧ್ಯಾಪನ, ಅವರಿಗಿರುವ ಸಾಮಾಜಿಕ ಕಳಕಳಿ ಮುಂತಾದ ನೂರಾರು ಸದ್ಗುಣಗಳ ಕುರಿತು ನಾನು ಆಕ್ಷೇಪವೂ ಮಾಡಿಲ್ಲ. ಅವುಗಳಲ್ಲಿ ನನಗೆ ವಿವಾದವೂ ಇಲ್ಲ. ಆ ಗುಣಗಳುಳ್ಳ ಅವರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು.

ನಾನು ಹೇಳುವ ಮಾತಿನಿಂದ ಸತ್ಯಾತ್ಮರ ಕುರಿತು ಜನರಿಗೆ ಭಕ್ತಿ ಕಡಿಮೆ ಆಗಬೇಕು ಎನ್ನುವದು ನನ್ನ ಮನಸ್ಸಿನ ಮೂಲೆಯಲ್ಲಿಯೂ ಇಲ್ಲ. ಬೇರೊಬ್ಬ ಜೀವನ 'ಶ್ರದ್ಧೆ'ಯನ್ನು ಬದಲಿಸಲು ಸಾಧ್ಯವೂ ಇಲ್ಲ ಎನ್ನುವದು ಗೀತಾಸಿದ್ಧಾಂತ.

ಚರ್ಚೆ ಇರುವದು, ಅವರಿಂದಾದ ಅವಹೇಳನದ ಬಗ್ಗೆ. ಆ ಅಪಹಾಸದ ನಗು, ಅ ಸುಳ್ಳು ಕಥೆ ಯನ್ನು

ಸಹಿಸಲು ಸಾಧ್ಯವೇ ಇಲ್ಲ. ಅವರ ಮೇಲಿನ ಭಕ್ತಿಯಿಂದ ನೀವು ಆ ಅಪಹಾಸದ ನಗುವನ್ನು ಉಪೇಕ್ಷಿಸಬಹುದು. ಆದರೆ, ನಮಗೆ ಸರ್ವಥಾ ಸಾಧ್ಯವಿಲ್ಲ. ಅದು ಅಪಹಾಸದ ನಗು ಎನ್ನುವದು ನಾವು ಭಾವಿಸಿದ್ದಲ್ಲ. ಕೇಳಿದ ಪ್ರತಿಯೊಬ್ಬರಿಗೂ ತಿಳಿಯುವಂತಹುದ್ದು.

ನಿಮಗೆ ಸತ್ಯಾತ್ಮರ ಮೇಲೆ ಎಷ್ಟು ಭಕ್ತಿಯಿದೆಯೋ ಅದರ ಸಾವಿರ ಪಟ್ಟು ಮಿಗಿಲಾದ ಭಕ್ತಿ ನಮಗೆ ಶ್ರೀಮಚ್ಚಂದ್ರಿಕಾಚಾರ್ಯರ ಮೇಲಿದೆ.

ಸತ್ಯಾತ್ಮರು ಹೇಳಿದ ಸುಳ್ಳು ಕಥೆ ಎಂದು ಕಥೆಯನ್ನು ಸುಳ್ಳು ಎಂದು ಪ್ರಮಾಣಪುರಸ್ಸರವಾಗಿ ಪ್ರತಿಪಾದಿಸಿದರೇ ನಿಮಗಿಷ್ಟು ನೋವಾಗಿರುವಾಗ

ಆ ಅಪಹಾಸದ ನಗು, ಆ ಸುಳ್ಳುಕಥೆ, ಅಕ್ಷೋಭ್ಯವೈಷ್ಣವರಾದ ಶ್ರೀ ರಾಮಚಂದ್ರತೀರ್ಥ ಗುರುಸಾರ್ವಭೌಮರನ್ನು  ಅಟ್ಟಿಸಿಕೊಂಡು ಹೋಗಿ ಸೋಲಿಸಿದರು  ಎಂಬೆಲ್ಲ ಕಥೆಗಳನ್ನು ಕೇಳುವಾಗ ಅವರ ಭಕ್ತರ ಮನಸ್ಸಿಗೆ ಎಷ್ಟು ನೋವಾಗಬೇಡ ಸ್ವಾಮಿ.

ಸತ್ಯಾತ್ಮರ ಭಕ್ತರು ಮಾತ್ರ ಭಕ್ತರೇ. ಬೇರೆ ಯತಿಸಾರ್ವಭೌಮರ ಭಕ್ತರು ಭಕ್ತರಲ್ಲವೇ.

ಕಡೆಯ ಪ್ರಶ್ನೆ —

ಇಷ್ಟೆಲ್ಲ ದೀರ್ಘಲೇಖವನ್ನು ಬರೆದಿದ್ದೀರಿ. ಸಂತೋಷ. “ಕಾಲಮಾನದ ದೃಷ್ಟಿಯಿಂದ ಕಥೆ ಹೊಂದುವದಿಲ್ಲ ಎನ್ನುವದು ಅವಶ್ಯ ವಿಚಾರ ಮಾಡಬೇಕಾದ ಅಂಶ” ಎಂದು ಬರೆದಿದ್ದೀರಿ.

ಆದರೆ ಕಾಲಮಾನದ ಕುರಿತ ಚರ್ಚೆಯನ್ನು ಮಾಡಿದ್ದೀರಾ.

ಎಂಟ್ಟತ್ತು ವರ್ಷಗಳ ಹಿಂದೆಯೇ ಆಕ್ಷೇಪ ಬಂದಿದೆ ಎನ್ನುತ್ತೀರಿ. ಸಂಶೋಧನೆ ಮಾಡಿ ಉತ್ತರ ನೀಡಿದ್ದೀರಾ.

ಸರಿ, ಈಗಲಾದರೂ ಸಂಶೋಧನೆ ಮಾಡಿ ನಮ್ಮ ನಿಲುವನ್ನು  ಯಾವಾಗ ತಿಳಿಸುತ್ತೇವೆ ಎಂದು ಹೇಳಿದ್ದೀರಾ.

ಸಂಶೋಧನೆಯಾಗಬೇಕು, ಚರ್ಚೆಯಾಗಬೇಕು ಎಂದು ಹೇಳಿಬಿಟ್ಟರೆ ಸುಮ್ಮನಾಗಿಬಿಡಬೇಕಾ.

ಈಗ ಚರ್ಚೆ ನಡೆಯುತ್ತಿದೆಯಲ್ಲ. ಸಂಶೋಧನೆ ಮಾಡಿ ತಿಳಿಸಿ. ವ್ಯಾಸರಾಜರೂ ರಘೂತ್ತಮರು ಸಮಕಾಲೀನರು ಹೌದೋ ಅಲ್ಲವೋ ಎನ್ನುವದನ್ನು ನಿರ್ಣಯಿಸಿ ಆ ಕಥೆ ಸುಳ್ಳೋ ಸತ್ಯವೋ ಎನ್ನುವದನ್ನು ಸಮಾಜದ ಮುಂದೆ ತಿಳಿಸಿ.

ಅಥವಾ, ಇನ್ನು ಒಂದು ವರ್ಷದ ಒಳಗೆ, ಅಂದರೆ ಹೇಮಲಂಬ ಸಂವತ್ಸರದ ಶ್ರೀಮಚ್ಚಂದ್ರಿಕಾಚಾರ್ಯರ ಆರಾಧನೆಯ ಒಳಗೆ ಸಂಶೋಧನೆ ಮಾಡಿ ನಿರ್ಣಯ ಪ್ರಕಟ ಮಾಡುತ್ತೇವೆ ಎಂದು ಉತ್ತರಾದಿಮಠ ಅಧಿಕೃತ ಪ್ರಕಟಣೆ[2] ನೀಡಲಿ. ನಾನು ಅಲ್ಲಿಯವರೆಗೆ ಈ ಕುರಿತು ಚರ್ಚೆಯನ್ನು ಮುಂದುವರೆಸುವದಿಲ್ಲ.

— ವಿಷ್ಣುದಾಸ ನಾಗೇಂದ್ರಾಚಾರ್ಯ

---

[2] ಈಗ ನೀಡಿದಂತೆ ನರಹರಿ ಸುಮಧ್ವ ಇದನ್ನು ಉತ್ತರಾದಿಮಠದ ಪ್ರಕಟಣೆ ಎಂದಂತಲ್ಲ, ಅಧಿಕೃತವಾದ ಪ್ರಕಟಣೆ ಬೇಕು.